**ದಿನಾಂಕಃ 10.07.2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 9 ನೇ ಪ್ರತಿವಾದಿ ಪರ ಶ್ರೀ.ಹೆಚ್.ಸಿ.ಎಂ. ವಕೀಲರಿಂದಃ**

ದಾವಾ ಸ್ವತ್ತು ನೆಲ ಮತ್ತು 1 ನೇ ಅಂತಸ್ತು ಮನೆ ಇರುತ್ತದೆ. 9 ನೇ ಪ್ರತಿವಾದಿ ಮತ್ತು ತಾಯಿ ಮೊದಲಿನಿಂದ ಪರಿಚಯ ಎಂದರೆ ಸರಿಯಲ್ಲ. ನನ್ನ ತಂದೆಗೆ ಸೇರಿದ ಆಸ್ತಿ ಭಾಗವಾನ್ ಆಸ್ಪತ್ರೆ ಮುಂದೆ ಇರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಮನೆಯಲ್ಲಿ 9 ನೇ ಪ್ರತಿವಾದಿಯ ತಾಯಿ ಫ್ಯಾನ್ಸಿ ಸ್ಟೋರ್ ಇಟ್ಟಿರುತ್ತಾರೆ ಎಂದರೆ ಸರಿಯಲ್ಲ. 9 ನೇ ಪ್ರತಿವಾದಿಯ ತಾಯಿ ಚಂದ್ರಬಾನ್ ಸಿಂಗ್ ಸಹೋದರಿ ಬಗ್ಗೆ ಗೊತ್ತಿಲ್ಲ. ದಾವಾ ಸ್ವತ್ತಿನ ನೆಲ ಮತ್ತು 1 ನೇ ಹಂತಸ್ತಿನಲ್ಲಿ ಅಂಗಡಿಗಳು ಇರುತ್ತವೆ ಎಂದರೆ ಸರಿಯಲ್ಲ. 9 ನೇ ಪ್ರತಿವಾದಿಯ ತಾಯಿ ದಾವಾ ಸ್ವತ್ತಿನ ನೆಲ ಮತ್ತು 1 ನೇ ಹಂತಸ್ತಿನ ಅಂಗಡಿಗಳನ್ನು ಬಾಡಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ, ನನ್ನ ಸ್ವಾಧೀನದಲ್ಲಿರುತ್ತದೆ. 9 ನೇ ಪ್ರತಿವಾದಿ ದಾವಾ ಸ್ವತ್ತಿನ ನೆಲ ಮತ್ತು 1 ನೇ ಹಂತಸ್ತಿನ ಮಳಿಗೆಗಳನ್ನು ಬಾಡಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದ ವಿದ್ಯುಚ್ಚಕ್ತಿ ಮತ್ತು ನೀರಿನ ಬಿಲ್ಲು ನನ್ನ ಹೆಸರಿನಲ್ಲಿರುವುದಿಲ್ಲ, ಆದರೆ 1 ಭಾರಿ ವಿದ್ಯುತ್ ಬಿಲ್ಲನ್ನು ಕಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆ 9 ನೇ ಪ್ರತಿವಾದಿ ತಾಯಿಗೆ ಸೇಲ್ ಸರ್ಟಿಫಿಕೇಟ್ ನ ಮೇಲೆ ದಾವಾ ಸ್ವತ್ತನು ಮಾರಾಟ ಮಾಡುತ್ತೇನೆ ಎಂದು ಮಾತುಕತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 9 ನೇ ಪ್ರತಿವಾದಿ ತಾಯಿಗೆ ನನ್ನ ತಂದೆ ಹಣ ತೆಗೆದುಕೊಂಡು ದಾವಾ ಸ್ವತ್ತನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 9 ನೇ ಪ್ರತಿವಾದಿಯ ತಾಯಿ ಮತ್ತು 9 ನೇ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ 9 ನೇ ಪ್ರತಿವಾದಿಯ ತಾಯಿಯ ಅಣ್ಣನಾದ ಚಂದ್ರ ಬಾನ್ ಸಿಂಗ್ ರವರ ಹೆಸರಿಗೆ ನೊಂದಣಿ ಕ್ರಯದ ಕರಾರು ಮಾಡಿರುತ್ತೇವೆ ಎಂದರೆ ಸರಿಯಲ್ಲ. 9 ನೇ ಪ್ರತಿವಾದಿ ತಂದೆ ಸೂರಜ್ ಬಾನ್ ಸಿಂಗ್ ಬ್ಯಾಂಕಿಗೆ ಉಳಿಕೆ ಹಣವನ್ನು ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯಕ್ಕೆ ಚಂದ್ರಬಾನ್ ಸಿಂಗ್ ಬ್ಯಾಂಕಿನ ಸದಸ್ಯ ಎಂದರೆ ಗೊತ್ತಿಲ್ಲ. ಚಂದ್ರಬಾನ್ ಸಿಂಗ್ ರವರ ಹೆಸರಿಗೆ ದಿಃ09.05.1994 ರಂದು

ದಾವಾ ಸ್ವತ್ತು ಕ್ರಯ ಪತ್ರ ಆಗಿರುತ್ತದೆ ಎಂದರೆ ಸರಿಯಲ್ಲ. OS.15/2019 ರ ದಾವೆ ಬಗ್ಗೆ ಗೊತ್ತಿದದರು ಸಹ 9ನೇ ಪ್ರತಿವಾದಿಯನ್ನು ಪಕ್ಷಗಾರರಾನ್ನಾಗಿ ಮಾಡದೆ 4 ರಿಂದ 7ನೇ ಪ್ರತಿವಾದಿಗಳ ಜೊತೆ ಸೇರಿ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎಂದರೆ ಸರಿಯಲ್ಲ. ನಾವು ಕ್ರಯದ ಕರಾರು ಪತ್ರ ಚಂದ್ರುಬಾನ್ ಸಿಂಗ್ ರವರಿಗೆ ಮಾಡಿಕೊಟ್ಟ ನಂತರ ದಾವಾ ಸ್ವತ್ತಿನಲ್ಲಿ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಮತ್ತು 3 ರಿಂದ 7ನೇ ಪ್ರತಿವಾದಿಗಳು ಶಾಮೀಲಾಗಿ 9ನೇ ಪ್ರತಿವಾದಿಯ ದಾವಾ ಸ್ವತ್ತಿನ ಸ್ವಾಧೀನ ಬಿಡಿಸಲು ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಲಪಟಾಯಿಸಲು ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹೆಚ್ಚುವರಿ ಹಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ಶಿರಾ.